**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ದಾಂಡೇಲಿ**

**ಸಿ. ಸಿ.- 461/2025**

**ಫಿರ್ಯಾದುದಾರರು** : ಶ್ರೀ. ಅನಿಲ ಕೃಷ್ಣ ಮೇಧಾ,
ವಯಸ್ಸುಃ 41 ವರ್ಷ,
ಉದ್ಯೋಗಃ ಅರಣ್ಯ ಗುತ್ತಿಗೆದಾರ,
ವಾಸಃ ಕಸ್ತೂರಿ ನಿವಾಸ, ರಾಘವೇಂದ್ರ ಮಠ,
ಟೌನ್‌ಶಿಪ್, ದಾಂಡೇಲಿ, ತಾಃ ದಾಂಡೇಲಿ,
ಜೆಃ ಉತ್ತರ ಕನ್ನಡ.

**--- ವಿರುದ್ಧ ---**

**ಆರೋಪಿ** : ಶ್ರೀ. ಮಹಾಂತೇಶ ಕೃಷ್ಣಪ್ಪ ಲಮಾಣಿ,
ವಯಸ್ಸುಃ 35 ವರ್ಷ,
ಉದ್ಯೋಗಃ ಮರ ಕತ್ತರಿಸುವ ಗುತ್ತಿಗೆದಾರ
ವಾಸಃ ಶಿಗಟ್ಟಿ ತಾಂಡಾ, ಮೆಡಿಕಲ್ ಶಾಪ್,
ಪಕ್ಕದ ರಸ್ತೆ, ಕಲಘಟಗಿ, ತಾಃ ಕಲಘಟಗಿ,
ಜಿಲ್ಲೆಃ ಧಾರವಾಡ.

ಆರೋಪಿಯಾದ ನಿಮ್ಮ ವಿರುದ್ಧ ಈ ಕೆಳಗಿನಂತೆ ನಾನು ಹೊರಿಸಿರುವಃ

**ಆಪಾದನೆ**

ಏನೆಂದರೆ ಆರೋಪಿಯಾದ ನೀವು ಮತ್ತು ಫಿರ್ಯಾದಿಯು ಪರಿಚಯಸ್ಥರಾಗಿದ್ದು, ಪಿರ್ಯಾದಿಯು ಅರಣ್ಯ ಪ್ರದೇಶದಲ್ಲಿ ಮರ ಕಡಿಯುವ ಗುತ್ತಿಗೆದಾರರಾಗಿದ್ದು, ಆರೋಪಿಯಾದ ನೀವು ಉಪ ಗುತ್ತಿಗೆದಾರರಾಗಿದ್ದು, ಆರೋಪಿಯಾದ ನೀವು ಮತ್ತು ನಿಮ್ಮ ಸಹೋದರ ಸೇರಿ ಮರ ಕಡಿಯಲು ಫಿರ್ಯಾದಿಯಿಂದ ರೂ.5,89,000/- ರೂಪಾಯಿಗಳನ್ನು ಫೋನ್‌ಪೇ ಮತ್ತು ನಗದು ರೂಪದಲ್ಲಿ ಪಡೆದುಕೊಂಡಿದ್ದು, ನಂತರ ನೀವು ಮರವನ್ನು ಕಡಿಯದೇ ಪಿರ್ಯಾದಿಯವರಿಂದ ಹಣವನ್ನು ಪಡೆದುಕೊಂಡಿದ್ದರಿಂದ ಫಿರ್ಯಾದಿಯು ನಿಮ್ಮ

ಹತ್ತಿರ ಸದರಿ ಹಣವನ್ನು ಮರಳಿ ಕೊಡಲು ಕೇಳಿದಾಗ, ನೀವು ದಿನಾಂಕ 07.04.2025 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಲಘಟಗಿ ಶಾಖೆಯ ನಿಮ್ಮ ಖಾತೆ ನಂ. 39815612228 ನೇದ್ದಕ್ಕೆ ಸಂಬಂಧಿಸಿದ ಚೆಕ್ ನಂ.785127 ಚೆಕ್ಕನ್ನು ರೂ.3,00,000/- ಹಣದ ಪಾವತಿಗಾಗಿ ಫಿರ್ಯಾದಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದಿದಾರರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ದಾಂಡೇಲಿ ಶಾಖೆಯಲ್ಲಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ಸದರಿ ಚೆಕ್ಕನ್ನು ಪರಿಶೀಲಿಸಿ ದಿನಾಂಕಃ 07.04.2025 ರಂದು "Funds Insufficient" ಎಂಬ ಹಿಂಬರಹದೊಂದಿಗೆ ಉತ್ತರಿಸಿರುತ್ತಾರೆ. ನಂತರ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ದಿನಾಂಕಃ 26-04-2023 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸನ್ನು ಜಾರಿ ಮಾಡಿದ್ದರೂ ಸಹ ನೀವು ಚೆಕ್ಕಿನ ಹಣ ಪಾವತಿ ಮಾಡದೇ ಉದ್ದೇಶಪೂರ್ವಕವಾಗಿ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂಬ ವಿಚಾರವನ್ನು ತಿಳಿದಿದ್ದು ಚೆಕ್ಕನ್ನು ನೆಗೋಶಿಯಬಲ್ ಎನ್ಸಷ್ಟುಮೆಂಟ್ ಕಾಯ್ದೆ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

**ಆರೋಪಿಯ ಹೇಳಿಕೆ**

1. **ಪ್ರಶ್ನೆಃ** ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ?

**ಉತ್ತರಃ**

2. **ಪ್ರಶ್ನೆಃ** ಈ ಆಪಾದನೆ ಬಗ್ಗೆ ನೀವು ನಿಮ್ಮ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

**ಉತ್ತರಃ**

(ಈ ಆಪಾದನೆಯನ್ನು ದಿನಾಂಕಃ 28.01.2026 ರಂದು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ, ಅವರಿಂದ ಉತ್ತರ ಪಡೆದು ದಾಖಲಿಸಿದ್ದೇನೆ.)

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದಾಂಡೇಲಿ**